# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

## **Ref**: 29/2021

ಡಬ್ಲ್ಯೂ. ಡಬ್ಲ್ಯೂ-2

**<u>ದಿನಾಂಕ 18.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ.ರವರಿಂದ:**

2 ನೇ ಪಕ್ಷಗಾರರ ಸಂಸ್ಥೆಯ ಹೈದರಾಬಾದ್ ನ ಯೂನಿಟ್‌ಗೆ ಸಂಬಂಧಪಟ್ಟಂತೆ ದಿಃ31.05.2020 ನಮ್ಮನ್ನು ಕೆಲಸದಿಂದ ಬಿಡುಗಡೆಗೊಳಿಸಿದಾಗ ನನಗೆ ಪರಿಹಾರ ಮತ್ತು Gratuity ಮೊತ್ತವನ್ನು ಸೇರಿ ಒಟ್ಟು ರೂ.1,31,820/- ಗಳನ್ನು ಕೊಟ್ಟಿದ್ದರು ಎನ್ನುವುದು ನಿಜ. ಸದರಿ ಮೊತ್ತವನ್ನು under protest ನಲ್ಲಿ ಪಡೆದುಕೊಂಡಿದ್ದೆ. ಅದಕ್ಕೆ ಸಂಬಂಧಪಟ್ಟು 2 ನೇ ಪಕ್ಷಗಾರರ ಸಂಸ್ಥೆಗೆ ಪತ್ರವನ್ನು ಬರೆದಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ಮೊತ್ತದೊಂದಿಗೆ ನಮ್ಮ Service Certificate ನ್ನು ಕೊಟ್ಟಿದ್ದರು ಎನ್ನುವುದು ನಿಜ. 2 ನೇ ಪಕ್ಷಗಾರರ ಸಂಸ್ಥೆಯ ಹೈದರಾಬಾದ್ ಯೂನಿಟ್ ನಲ್ಲಿ ಕಾರ್ಮಿಕರು ಉತ್ಪಾದನೆಯ ಕೆಲಸ ಮಾಡುವಂತಹ ಎಲ್ಲ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದರು ಸಹ ನಾವು ಉದ್ದೇಶ ಪೂರಕ ಕೆಲಸ ಮಾಡದೇ ಮುಷ್ಕರಗಳನ್ನು ಮಾಡಿದ್ದೇವು ಎನ್ನುವುದು ಸರಿಯಲ್ಲ.

ತಿರುಪತಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ಅವರಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ವಿರುದ್ಧ ನಾವು ದೂರು ಸಲ್ಲಿಸಿದ್ದು, ಅದರ ಅನ್ವಯ ದಿಃ 16.08.2018, 29.09.2018, 06.10.2018 ಮತ್ತು 12.10.2018 ರಂದು ನಮ್ಮನ್ನು ಸಮಾಲೋಚನೆಗೆ ಕರೆದಿದ್ದರು ಎನ್ನುವುದು ನಿಜ. ಸದರಿ ಸಮಾಲೋಚನೆಗೆ ನಾನು, ಟಿ.ಎಸ್. ನಂದೀಶ್, ಧನರಾಜೇಗೌಡ, ರವಿ.ಎಸ್ ಮಾತ್ರ ಸಮಾಲೋಚನೆಗೆ ಭಾಗವಹಿಸುತ್ತಿದ್ದೇವು. ಸ್ಥಳೀಯ ಕಾರ್ಮಿಕರ ಸಂಘಟನೆಯ ಮುಖಂಡರು ನಮ್ಮೊಂದಿಗೆ ಭಾಗವಹಿಸುತ್ತಿದ್ದರು. ದಿಃ01.09.2018 ರಿಂದ 30.09.2018 ರ ಅವಧಿಗೆ ವೇತನವನ್ನು ಕೊಟ್ಟಿರುವುದಿಲ್ಲ ಎಂದು ಕರ್ನೂಲ Joint Labour Commissioner ರವರಿಗೆ ದೂರು ಸಲ್ಲಿಸಿದ್ದೇವೆ ಎನ್ನುವುದು ನಿಜ. ಸದರಿ ದೂರಿಗೆ 2 ನೇ ಪಕ್ಷಗಾರರ ಸಂಸ್ಥೆಯೂ ನಾವು ಕೆಲಸ ಮಾಡದೇ ಇರುವುದರಿಂದ ವೇತನ ಕೊಡಲು ಆಗುವುದಿಲ್ಲ ಎಂದು ತಕರಾರು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಿಃ06.06.2019 ರಂದು ಸಂಸ್ಥೆ ಮತ್ತೆ ನಾವು ಸದರಿ

ಪ್ರಕರಣವನ್ನು ಇತ್ಯರ್ಥ ಮಾಡಿಕೊಳುತ್ತೇವೆ ಎಂದು  ತಿಳಿಸಿದ್ದರಿಂದ ಸದರಿ ಅರ್ಜಿಯನ್ನು ಮುಕ್ತಾಯಗೊಳಿಸಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆ ವಿರುದ್ಧ ತಿರುಪತಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ಮತ್ತು Joint Labour Commissioner ರವರಲ್ಲಿ ಸಲ್ಲಿಸಿದ್ದ ಅರ್ಜಿಗಳು ಮುಕ್ತಾಯ ಆಗಿರುತ್ತವೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೇ ಸಮಾಲೋಚನೆಗಳಿಗೆ ಹಾಜರಾಗಿರುತ್ತೇವೆ. ಸದರಿ ದೂರುಗಳು ಇಂದಿನವರೆಗೂ ಯಾವ ಹಂತದಲ್ಲಿ ಇವೇ ಎಂದು ನಾವು ತಿಳಿದುಕೊಂಡಿರುವುದಿಲ್ಲ. ದಿಃ21.10.2019 ರಂದು ತಿರುಪತಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ರವರಲ್ಲಿ ನಾನು ಈಗ ನೋಡುತ್ತಿರುವಂತೆ  Chater of Demand  ನ್ನು ಸಲ್ಲಿಸಿದ್ದೇವು ಎನ್ನುವುದು ನಿಜ. ಸದರಿ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯೂ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ನಿ.ಎಂ.4 ಎಂದು ಗುರುತಿಸಲಾಯಿತು. ಸದರಿ ಅರ್ಜಿಯೂ ಯಾವ ಹಂತದಲ್ಲಿ ಇದೆ ಎಂದು ನನಗೆ ಈಗ ಗೊತ್ತಿರುವುದಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯ  ವಿರುದ್ಧ ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ ಹಲವಾರು ಬೇಡಿಕೆಗಳಿಗೆ ಸಂಬಧಪಟ್ಟು ಮತ್ತು ನಮ್ಮನ್ನು retrenchment ಮಾಡಿದ ವ್ಯಾಜ್ಯಕ್ಕೆ ಸಂಬಂಧಪಟ್ಟು ದೂರುಗಳನ್ನು ದಾಖಲಿಸಿದ್ದೇವು ಎನ್ನುವುದಕ್ಕೆ ಸಾಕ್ಷಿಯೂ retrenchment ಮಾಡಿದ ವ್ಯಾಜ್ಯವನ್ನು ಸಲ್ಲಿಸಿರುವುದಿಲ್ಲ. ಉಳಿದ ವ್ಯಾಜ್ಯಗಳು ಯಾವ ಹಂತದಲ್ಲಿ ಇರುತ್ತವೆ ಎಂದು ನಾವು ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ. ನಾವು ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ retrenchment ಗೆ ಸಂಬಂಧಪಟ್ಟಂತೆ ದೂರನ್ನು ಸಲ್ಲಿಸಿದ್ದು, ಆ ನಂತರದಲ್ಲಿ ನಾವು ಹಾಜರಾಗದೇ ಇದಿದ್ದರಿಂದ ಸದರಿ ಅರ್ಜಿ ವಜಾಗೊಂಡಿತ್ತು ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ನಮ್ಮನ್ನು ತಿರುಪತಿಯ ಯೂನಿಟ್‌ನಿಂದ retrenchment ಮಾಡಿ ಪರಿಹಾರವನ್ನು ಸದರಿ ಯೂನಿಟ್‌ನಿಂದಲೇ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ.

ನನ್ನ  ಮನೆಯ ವಿಳಾಸಕ್ಕೆ ಆಡಳಿತ ವರ್ಗದವರು  retrenchment ಆದೇಶ ಮತ್ತು ಪರಿಹಾರದ ಹಣವನ್ನು ಅಂಚೇ ಮೂಲಕ ಕಳುಹಿಸಿದ್ದು, ಅದನ್ನು ನಾನು ಸ್ವೀಕರಿಸಿದ್ದೆ ಎನ್ನುವುದು ನಿಜ.  ಸದರಿ ಅಂಚೇ ತಿರುಪತಿಯ 2 ನೇ ಪಕ್ಷಗಾರರ ಸಂಸ್ಥೆಯ ವಿಳಾಸದಿಂದ ಬಂದಿತ್ತು ಎನ್ನುವುದು ಸುಳ್ಳು.  ಸದರಿ  retrenchment ಆದೇಶ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೇ  ಹಾಜರುಪಡಿಸುತ್ತೇನೆ. ದಿಃ01.06.2020 ರಂದು ನನ್ನನ್ನು retrenchment  ಮಾಡಿದನಂತರದಲ್ಲಿ ನನಗೆ ಬೇರೆ ಕಡೆ ಕೆಲಸ ಸಿಗದೇ ಇದಿದ್ದರಿಂದ ಕೆಲಸವನ್ನು ಮಾಡುತ್ತೀರುವುದಿಲ್ಲ.

Retrenchment ಮಾಡಿದ ಕಾರ್ಮಿಕರಲ್ಲಿ ಕೇಲವೊಂದು ಕಾರ್ಮಿಕರು ಹೆಚ್ಚಿನ ಪರಿಹಾರ ಕೇಳಿ 2 ನೇ ಪಕ್ಷಗಾರ ಸಂಸ್ಥೆಯನ್ನು ಬೇಟಿ ಮಾಡಿದ್ದರು ಎನ್ನುವುದು ಸುಳ್ಳು.

ನಾನು 1 ನೇ ಪಕ್ಷಗಾರ ಸಂಘಟನೆಯಲ್ಲಿ ಖಂಜಾಚಿಯಾಗಿರುತ್ತೇನೆ. ಸದರಿ ಸಂಘಟನೆಯನ್ನು ತಿರುಪತಿಯಲ್ಲಿ ನೊಂದಣಿ ಮಾಡಿಸಿರುವುದಿಲ್ಲ. ಆದರೇ ಮೈಸೂರಿನಲ್ಲಿ ನೊಂದಣಿ ಮಾಡಿಸಿರುತ್ತೇವೆ. ನಮ್ಮ ಸಂಘವನ್ನು ಮೈಸೂರಿನಲ್ಲಿ ನೊಂದಣಿ ಮಾಡಿಸಿರುವುದರಿಂದ ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದಕ್ಕೆ ಸಾಕ್ಷಿಯೂ ನಮ್ಮನ್ನು ಮೈಸೂರಿನ ಸಂಸ್ಥೆಯೂ ಕೆಲಸದಿಂದ ತೆಗೆದಿರುವುದರಿಂದ ಈ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇವೆ. ದಿಃ31.05.2020 ರ ನಂತರದಿಂದ ನಾನು 2 ನೇ ಪಕ್ಷಗಾರರ ಸಂಸ್ಥೆಯ ಮೈಸೂರಿನ ಮತ್ತು ತಿರುಪತಿಯ ಯೂನಿಟ್ ನಲ್ಲಿ ಕೆಲಸವನ್ನು ಮಾಡಿರುವುದಿಲ್ಲ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ಕೋವಿಡ್ ಕಾರಣದಿಂದ ಕೆಲಸವನ್ನು ಮಾಡಿರುವುದಿಲ್ಲ. ಕೋವಿಡ್ ಅವಧಿಯ ನಂತರ ನಾನು ಹಾಗೂ ಉಳಿದ 1 ನೇ ಪಕ್ಷಗಾರರು ಮೈಸೂರು ಯೂನಿಟ್ ನಲ್ಲಿ ಕೆಲಸವನ್ನು ಮಾಡಿರುವುದಿಲ್ಲ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ನಾವು ಕೆಲಸ ಕೊಡಲು ಕೇಳಿದರು 2 ನೇ ಪಕ್ಷಗಾರರ ಸಂಸ್ಥೆಯವರು ಕೆಲಸವನ್ನು ಕೊಟ್ಟಿರಲಿಲ್ಲ. ನಾವು ಮೈಸೂರು ಯೂನಿಟ್ ನ ಕಾರ್ಮಿಕರು ಆಗಿರದೇ ಇದಿದ್ದರಿಂದ ಮತ್ತು ದಿಃ31.05.2020 ರಂದು ನಮ್ಮನ್ನು ತಿರುಪತಿಯ ಯೂನಿಟ್ ನವರು ಕೆಲಸದಿಂದ ತೆಗೆದಿರುವುದರಿಂದ ಮೈಸೂರಿನ ಯೂನಿಟ್ ನವರು ನಮಗೆ ಕೆಲಸವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ಈ ಪ್ರಕರಣವು 2 ನೇ ಪಕ್ಷಗಾರರ ಸಂಸ್ಥೆಗೆ ಬಾಧ್ಯಸ್ಥ ಆಗುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ಜೀವನ ನಿರ್ವಹಣೆಗೆ ಯಾವುದೇ ತೊಂದರೆ ಇಲ್ಲದೇ ಇದ್ದರು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯ ಆಡಳಿತ ವರ್ಗದ ಮೇಲಿನ ದ್ವೇಷದ ಕಾರಣಕ್ಕೆ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತುಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**